OS 56/2019

PW-1

ದಿನಾಂಕಃ **28.03.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ. ಹೆಚ್ ಸಿ ವಕೀಲರಿಂದಃ**

**ಸಾಕ್ಷಿಗೆ ಕನ್ನಡ ಭಾಷೆ ಅರ್ಥವಾಗದ ಕಾರಣ ಶ್ರೀ ಕೆ ಆರ್ ವಕೀಲರನ್ನು ಕನ್ನಡ ಅನುವಾದಕರಾಗಿ ನೇಮಿಸಿ ಪ್ರಮಾಣ ವಚನ ಬೋದಿಸಲಾಯಿತು.**

ನನ್ನ ಹೆಸರು ಜಯಮ್ಮ. ನನಗೆ ತೆಲುಗು ಭಾಷೆ ಮಾತ್ರ ಬರುತ್ತದೆ. ನನಗೆ ಕನ್ನಡ ಭಾಷೆ ಬರುವುದಿಲ್ಲ. ನನ್ನ ಊರು ಆಂದ್ರ ಪ್ರದೇಶದ ಪೆನುಕೊಂಡ ತಾಲೂಕು, ರೊದ್ದಂ ಮಂಡಲಂ, ದೊಡಘಟ್ಟ ಕೊಟ್ಬಾಲ ಗ್ರಾಮ. ನಾನು ಈ ದಿನ ನಮ್ಮ ಊರಿನಿಂದ ಬಂದಿರುತ್ತೇನೆ. ನಾವು 3 ಜನ ಅಕ್ಕ ತಂಗಿಯರು. ಅವರೆಂದರೆ ಆದಿಲಕ್ಷ್ಮಮ್ಮ, ಸಾವಿತ್ರಮ್ಮ ಮತ್ತು ನಾನು ಹಾಗೂ ನನ್ನ ಸಹೋದರ ಆಂಜನೇಯಲು. ನನ್ನ ಮದುವೆಯಾಗಿ ಸುಮಾರು 45 ವರ್ಷ ಆಗಿರಬಹುದು. ನನ್ನ ತಂದೆಯ ಹೆಸರು ವೇಲುರು ವೆಂಕಟಯ್ಯ. ನನ್ನ ತಾಯಿಯ ಹೆಸರು ವೆಂಕಟಲಕ್ಷ್ಮಮ್ಮ. ನಾನು, ಆದಿಲಕ್ಷ್ಮಮ್ಮ ಮತ್ತು ಸಾವಿತ್ರಮ್ಮ 3 ಜನ ವಿಶ್ವಾಸದಿಂದ ಚೆನ್ನಾಗಿ ಇದ್ದೇವೆ. ಎಲ್ಲಾ ವಿಚಾರಗಳನ್ನು ನಾವು ಮೂವರು ಜನ ಮಾತನಾಡುತ್ತೇವೆ ಎಂದರೆ ಸರಿ. ಕೋರ್ಟ ಆವರಣದಲ್ಲಿ ನಾನು ಮತ್ತು ಸಾವಿತ್ರಮ್ಮ ಚೆನ್ನಾಗಿ ಮಾತನಾಡಿಕೊಂಡು ಇರುತ್ತೇವೆ ಎಂದರೆ ಸರಿ. ನಿಮ್ಮ ತಮ್ಮ ಭಾಗ ಕೊಡುವುದಿಲ್ಲ ಎಂದು ಹೇಳಿದಾಗ ನೀವು, ವೆಂಕಟಲಕ್ಷ್ಮಮ್ಮ , ಆದಿಲಕ್ಷ್ಮಮ್ಮ 3 ಜನ ಸೇರಿ ಮಾತನಾಡಿಕೊಂಡು ಈ ಕೇಸ್ ಹಾಕಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಯಾರು ಯಾರು ಮಾತನಾಡಿಕೊಂಡು ಈ ಕೇಸ್ ಹಾಕಿದ್ದೀರಿ ಎಂದರೆ ಸಾಕ್ಷಿ ನಾನು, ಆದಿಲಕ್ಷ್ಮಮ್ಮ ಮತ್ತು ಸಾವಿತ್ರಮ್ಮ ಮಾತನಾಡಿಕೊಂಡು ಹಾಕಿದ್ದೇವೆ ಎಂದು ಉತ್ತರಿಸುತ್ತಾರೆ. ಭಾಗ ಕೊಡಿ ಎಂದು ನೀವು ನಿಮ್ಮ ತಂದೆ ಹಾಗೂ ತಮ್ಮನ ಹತ್ತಿರ ಯಾವಾಗ ಕೇಳಿರುತ್ತೀರಿ ಎಂದರೆ ಸಾಕ್ಷಿ 3 ವರ್ಷಗಳ ಹಿಂದೆ

ಕೇಳಿದ್ದೇನೆ ಎಂದು ಉತ್ತರಿಸುತ್ತಾರೆ. ಅದಕ್ಕಿಂತ ಮುಂಚೆ ಭಾಗ ಕೇಳಿರುವುದಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

ನನ್ನ ಯಜಮಾನರ ಹೆಸರು ಚಂದ್ರಪ್ಪ. ನನ್ನ ಯಜಮಾನರು ವ್ಯವಸಾಯ ಮಾಡುತ್ತಾರೆ. ನನ್ನ ಯಜಮಾನರ ಹೆಸರಿನಲ್ಲಿ ದೊಡಘಟ್ಟ ಕೊಟ್ಟಾಲದಲ್ಲಿ ಸ್ವಲ್ಪ ಜಮೀನು ಮಾತ್ರ ಇದೆ. ನಿಮ್ಮ ತಂದೆ ಬದುಕಿದ್ದಾಗ ನೀವು ಅವರನ್ನು ಮಾತನಾಡಿಸಲು ತಿರುಮಣಿಗೆ ಹೋಗುತ್ತಿದ್ದಾಗ ಅವರು ನಿಮ್ಮನ್ನು ಚೆನ್ನಾಗಿ ಮಾತಾನಾಡಿಸುತ್ತಿದ್ದರು ಎಂದರೆ ಸಾಕ್ಷಿ ಹೌದು ಮಾತನಾಡಿಸುತ್ತಿದ್ದರು ಎಂದು ಉತ್ತರಿಸುತ್ತಾರೆ. ಅವರು ಎಲ್ಲಾ ಮಕ್ಕಳನ್ನು ಒಂದೇ ರೀತಿ ನೋಡುತ್ತಿದ್ದರು ಎಂದರೆ ಸರಿ. ನಿಮ್ಮ ಮದುವೆ ಕಾಲಕ್ಕೆ ನಿಮ್ಮ ತಮ್ಮ ಹಾಗೂ ತಂದೆ ಎಷ್ಟು ಸಾಧ್ಯವೋ ಅಷ್ಟು ಹಣ ಖರ್ಚು ಮಾಡಿ ಚೆನ್ನಾಗಿ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿ ಏನು ಇಲ್ಲ, 3 ತೊಲಾ ಬಂಗಾರ ಕೊಟ್ಟು ಸರಳವಾಗಿ ಮದುವೆ ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ನಾನು ಹೆಣ್ಣು ಮಕ್ಕಳ ಪೈಕಿ ಕೊನೆಯ ಮಗಳು. ನಿಮ್ಮ ಇಬ್ಬರು ಅಕ್ಕಂದಿರನ್ನು ಚೆನ್ನಾಗಿಯೇ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅವರಿಗೂ ಸರಳವಾಗಿಯೇ ಮದುವೆ ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ಹಾಗೂ ನಿಮ್ಮ ಅಕ್ಕಂದಿರ ಮದುವೆಯನ್ನು ನಿಮ್ಮ ತಂದೆ ಹಾಗೂ ನಿಮ್ಮ ತಮ್ಮ ನೋಡಿ ಮಾಡಿದ ಮದುವೆ ಎಂದರೆ ಸಾಕ್ಷಿ ನನ್ನ ತಮ್ಮ ಚಿಕ್ಕವನಿದ್ದ ನಮ್ಮ ತಂದೆ ನೋಡಿ ಮದುವೆ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ.  ನಮ್ಮ ತಂದೆ ಮೂಲತಃ ಚನ್ನರಾಯಪಲ್ಲಿ ಆಂದ್ರ ಪ್ರದೇಶದವರು. ನಮ್ಮ ತಂದೆ ತಿರುಮಣಿಗೆ ಯಾವ ವರ್ಷ ಬಂದು ನೆಲೆಸಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ನಿಮ್ಮ ತಂದೆಯ ಆಸ್ತಿಗಳಾ ಅಥವಾ ತಾತನ ಆಸ್ತಿಗಳಾ ಎಂದರೆ ಸಾಕ್ಷಿ ನಮ್ಮ ಅಜ್ಜಿ ಲಕ್ಷ್ಮಮ್ಮನ ಆಸ್ತಿ ಎಂದು ಉತ್ತರಿಸುತ್ತಾರೆ. ಅಜ್ಜಿ ಎಂದರೆ ಸಾಕ್ಷಿ ನಿಮ್ಮ ತಾತ ವೆಂಕಟೇಶಪ್ಪನ ಹೆಂಡತಿಯಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಮ್ಮ ಅಜ್ಜಿಯ ಊರು ತಿರುಮಣಿ ಗ್ರಾಮವಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಗಳು ನಮ್ಮ ಖರೀದಿ ಮಾಡಿದ ಆಸ್ತಿಗಳು ಅಲ್ಲ

ಎಂದರೆ ಸಾಕ್ಷಿ ಅಲ್ಲ ಎಂದು ಉತ್ತರಿಸುತ್ತಾರೆ. ಹಾಗೆಯೆ ಸದರಿ ಆಸ್ತಿಗಳು ನಿಮ್ಮ ತಾತ ಖರೀದಿ ಮಾಡಿದ ಆಸ್ತಿಗಳು ಅಲ್ಲ ಎಂದರೆ ಸಾಕ್ಷಿ ಖರೀದಿ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ತಾತನ ತಂದೆಯ ಹೆಸರು ಹೇಳಲು ಆಗುವುದಿಲ್ಲ. ನಿಮ್ಮ ತಾತನ ತಂದೆ ಹೆಸರು ಬಸಪ್ಪ, ಅವರು ಚನ್ನರಾಯಪಲ್ಲಿ ಯವರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಲಕ್ಷ್ಮಮ್ಮನವರು ನಿಮಗೆ ಏನಾಗಬೇಕು ಎಂದರೆ ಸಾಕ್ಷಿ ಅಜ್ಜಿ ಅಂದರೆ ನನ್ನ ತಂದೆಯವರು ತಾಯಿಯಾಗಬೇಕು ಎಂದು ಉತ್ತರಿಸುತ್ತಾರೆ. ನಿಮ್ಮ ತಾತ ರವರು ಚನ್ನರಾಯಪಲ್ಲಿ ಯಿಂದ ತಿರುಮಣಿಗೆ ಯಾವ ಕಾರಣಕ್ಕೆ ಬಂದು ನೆಲೆಸಿದರು ಗೊತ್ತಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಗಳು ನನ್ನ ತಾತನ ಆಸ್ತಿಯಲ್ಲ ಎಂದರೆ ಸರಿ. ನಿಮ್ಮ ಅಜ್ಜಿ ಲಕ್ಷ್ಮಮ್ಮನವರ ತಂದೆಯ ಹೆಸರು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯವರ ಬಳಿ ಅವರ ತಂದೆ ತಾಯಿ ಹೆಸರು ಕೇಳಬಹುದಿತ್ತು ಎಂದರೆ ಸಾಕ್ಷಿ ಕೇಳಿದ್ದೇವೆ ಆದರೆ ಈಗ ಮರೆತು ಹೋಗಿದೆ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಗಳು ನಿಮ್ಮ ತಾತ ಹಾಗೂ ತಂದೆಯ ಆಸ್ತಿಗಳು ಎಂದು ಹೇಳಿರುವುದಕ್ಕೆ ಏನಾದರೂ ದಾಖಲಾತಿಗಳನ್ನು ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿ ನಮ್ಮ ಬಳಿ ಏನಿರುತ್ತೇ ಎಂದು ಉತ್ತರಿಸುತ್ತಾರೆ. ಆ ದಾಖಲಾತಿಗಳು ಯಾರ ಬಳಿ ಇವೆ ಎಂದರೆ ಸಾಕ್ಷಿ ನನ್ನ ತಮ್ಮನ ಬಳಿ ಇವೆ ಎಂದು ಉತ್ತರಿಸುತ್ತಾರೆ. ನಿಮ್ಮ ತಮ್ಮ ನಿಮ್ಮ ತಂದೆ ಹಾಗೂ ಅವರ ಸಹೋದರರ ಮೇಲೆ ಇದೇ ನ್ಯಾಯಾಲಯದಲ್ಲಿ ಕೇಸ್ ಹಾಕಿದ್ದ ವಿಚಾರ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎಂದು ಉತ್ತರಿಸುತ್ತಾರೆ. ಆ ಕೇಸಿನ ನಂಬರ್ ನನಗೆ ಗೊತ್ತಿಲ್ಲ. ಆ ಕೇಸ್ ಹಾಕಿರುವ ವಿಚಾರ ನಿಮಗೆ ಗೊತ್ತಾದ ನಂತರವೇ ನೀವು ಈ ಕೇಸನ್ನು ಹಾಕಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಈ ಕೇಸ್ ಹಾಕುವ ಮೊದಲು ಭಾಗ ಬೇಕು ಎಂದು ಯಾರ ಬಳಿ ಕೇಳಿದ್ದೀರಿ ಎಂದರೆ ಸಾಕ್ಷಿ ನನ್ನ ತಂದೆಯ ಬಳಿ ಎಂದು ಉತ್ತರಿಸುತ್ತಾರೆ. ನಿಮ್ಮ ತಮ್ಮನ ಬಳಿ ನೀವು ಭಾಗ ಕೇಳಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಭಾಗ ಕೊಡುವುದಿಲ್ಲ ಎಂದು ಹೇಳಿದರಾ ಎಂದರೆ ಸಾಕ್ಷಿ ಕೊಡುತ್ತೇನೆ ಎಂದು ಹೇಳಿದರು ಎಂದು ಉತ್ತರಿಸುತ್ತಾರೆ. ನನ್ನ ತಂದೆ ತಾಯಿ ಈಗ

ಬದುಕಿರುವುದಿಲ್ಲ. ನಿಮ್ಮ ತಂದೆ ತಾಯಿ ತೀರಿಕೊಂಡ ಸಮಯದಲ್ಲಿ ಅವರ ಅಂತ್ಯಕ್ರಿಯೆಗೆ ನೀವು ಹೋಗಿದ್ದೀರಾ ಎಂದರೆ ಸಾಕ್ಷಿ ಹೋಗಿದ್ದೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯ ಅಣ್ಣ ತಮ್ಮನ ಹೆಸರು ಏನು ಎಂಬ ಪ್ರಶ್ನೆಗೆ ಸಾಕ್ಷಿ ವೆಂಕಟರಾಮಪ್ಪ, ಶ್ರೀರಾಮಪ್ಪ. ನಿಮ್ಮ ತಂದೆ ಹಾಗೂ ಅವರ ಸಹೋದರರ ನಡುವೆ ಇದೇ ನ್ಯಾಯಾಲಯದಲ್ಲಿ ಒ ಎಸ್ 12/2013 ದಾವೆ ನಡೆಯುತ್ತಿತ್ತು ಎಂದರೆ ಸಾಕ್ಷಿ ಇತ್ಯರ್ಥವಾಗಿದೆ ಅದರ ನಂಬರ್ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ ದಾವೆ ಇತ್ಯರ್ಥವಾಗಿರುವ ವಿಚಾರ ನಿಮಗೆ ಗೊತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಹಾಗೂ ಅವರ ಸಹೋದರರ ನಡುವೆ ಆ ಕೇಸ್ ಇದ್ದ ವಿಚಾರ ನಿಮಗೆ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿ ನ್ಯಾಯಾಲಯದಿಂದ ನನ್ನ ತಮ್ಮ ಎಲ್ಲಾ ನನಬೇಕು ಎಂದು ನೋಟಿಸ್ ಕಳುಹಿಸಿದ್ದ ಆಗ ನಮಗೆ ಗೊತ್ತಾಯಿತು ಎಂದು ಉತ್ತರಿಸುತ್ತಾರೆ.

ನಿಮ್ಮ ತಮ್ಮ ನಿಮ್ಮ ತಂದೆಯ ವಿರುದ್ಧ ಕೇಸು ಹಾಕಿದ್ದು, ಆ ಕೇಸಿನಲ್ಲಿ ನೋಟಿಸ್ ಬಂದಾಗ ನಿಮಗೆ ಭಾಗ ಕೇಳಿ ಕೇಸ್ ಹಾಕಲು ಆಲೋಚನೆ ಬಂತು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಈ ರೀತಿ ನಿಮ್ಮ ತಂದೆಗೆ ನಿಮ್ಮ ಕಳುಹಿಸಿದ ನೋಟಿಸ್ ಬಂದ ನಂತರ ನಿಮ್ಮ ತಂದೆ ನಿಮಗೆ ನೀವು ಹೋಗಿ ಭಾಗ ಕೇಳಿ ಕೇಸ್ ಹಾಕಿ ಎಂದು ಹೇಳಿದ ಕಾರಣ ಈ ಕೇಸ್ ಹಾಕಿದ್ದೀರಿ ಎಂದರೆ ಸಾಕ್ಷಿ ನಮ್ಮ ತಂದೆಯು ಹೇಳಿದರು ಹಾಗೆಯೇ ನಾವು ಬೇರೆಯವರನ್ನು ವಿಚಾರ ಮಾಡಿ ಕೇಸ್ ಹಾಕಿದ್ದೇನೆ ಎಂದು ಉತ್ತರಿಸುತ್ತಾರೆ. ಈ ಕೇಸ್ ಹಾಕುವ ಮುಂಚೆ ನೀವು ನಿಮ್ಮ ತಂದೆಯ ಬಳಿ ಹೋಗಿ ಈ ಕೇಸ್ ಹಾಕುತ್ತಿರುವ ವಿಚಾರ ತಿಳಿಸಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಕೇಸ್ ಹಾಕುವ ಮೊದಲು ಯಾರ ಯಾರ ಬಳಿ ವಿಚಾರಿಸಿದಿರಿ ಎಂದರೆ ಸಾಕ್ಷಿ ನೋಟಿಸ್ ಬಂದ ನಂತರ ನಾನು, ನನ್ನ ಅಕ್ಕ ತಂಗಿಯರು ಹಾಗೂ ನನ್ನ ತಂದೆಯೊಂದಿಗೆ ವಿಚಾರ ಮಾಡಿ ಕೇಸ್ ಹಾಕಿದ್ದೆವು ಎಂದು ಉತ್ತರಿಸುತ್ತಾರೆ.

ನಿಮ್ಮ ತಂದೆ ಹಾಗೂ ಚಿಕ್ಕಪ್ಪನವರ ನಡುವೆ ಇದ್ದ ಒ ಎಸ್ 12/2013 ಇತ್ಯರ್ಥವಾಗಿದೆ ಎಂದರೆ ಸಾಕ್ಷಿ ಆಗಿದೆ ಎಂದು ಉತ್ತರಿಸುತ್ತಾರೆ. ನನ್ನ ತಂದೆ ಹಾಗೂ ಚಿಕ್ಕಂದಿರಿಗೆ ಒಬ್ಬೊಬ್ಬರಿಗೆ ತಲಾ 50 ಎಕರೆ ಜಮೀನು ಬರುತ್ತದೆ. ಇಂತಿಷ್ಟೇ ವಿಸ್ತೀರ್ಣ ನಿಮ್ಮ ತಂದೆಗೆ ಬಂದಿದೆ ಎಂದು ನಿಮಗೆ ಹೇಳಲು ಆಗುವುದಾ ಎಂದರೆ ಸಾಕ್ಷಿ ನನಗೆ ಓದು ಬರಹ ಬರುವುದಿಲ್ಲ, ಹಾಗಾಗಿ ಸರ್ವೆ ನಂಬರ್, ಚೆಕ್‌ಬಂದಿ ಮತ್ತು ವಿಸ್ತೀರ್ಣ ಹೇಳಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ. ನಾನು 8 ಸರ್ವೆ ನಂಬರ್ ಆಸ್ತಿಗಳಲ್ಲೂ ಭಾಗ ಬರಬೇಕು ಎಂದು ಕೇಳಿದ್ದೇನೆ. ನಿಮಗೆ ಇವತ್ತಿಗೂ ದಾವಾ ಸ್ವತ್ತುಗಳ ಸರ್ವೆ ನಂಬರ್, ಚೆಕ್‌ಬಂದಿ ಮತ್ತು ವಿಸ್ತೀರ್ಣ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ಜಮೀನುಗಳನ್ನು ನೋಡಿದ್ದೇನೆ ಆದರೆ  ಸರ್ವೆ ನಂಬರ್, ಚೆಕ್‌ಬಂದಿ ಮತ್ತು ವಿಸ್ತೀರ್ಣ ಹೇಳಲು ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ಎಲ್ಲಾ ಜಮೀನುಗಳು ಯಾವ ಯಾವ ಊರಿನಲ್ಲಿ ಇವೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ಎಲ್ಲಾ ಜಮೀನುಗಳು ತಿರುಮಣಿ ಗ್ರಾಮದಲ್ಲಿಯೇ ಇವೆ  ಎಂದು ಉತ್ತರಿಸುತ್ತಾರೆ. ಅನ್ನದಾನಪುರ ಹತ್ತಿರ ಒಂದು ಜಮೀನು ಇದೆ, ಉಳಿದ ಎಲ್ಲವೂ ತಿರುಮಣಿ ಗ್ರಾಮದಲ್ಲಿ ಇವೆ. ಈ ಕೇಸು ಹಾಕಿದ ನಂತರ ನೀವು ನಿಮ್ಮ ತಂದೆ ಬದುಕಿದ್ದಾಗ ಅವರನ್ನು ನೋಡಲು ಹೋಗಿ ಬಂದು ಮಾಡುತ್ತಿದ್ದಿರಿ ಮತ್ತು ಅವರೊಂದಿಗೆ ಚೆನ್ನಾಗಿ ಇದ್ದಿರಿ ಎಂದರೆ ಸಾಕ್ಷಿ ಹಾಗೇನು ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮನ್ನು ಚಂದ್ರಪ್ಪರವರಿಗೆ ಮದುವೆ ಮಾಡಿಕೊಟ್ಟ ನಂತರ ನೀವು ನಿಮ್ಮ ತಂದೆ ತಾಯಿಯನ್ನು ನೋಡಿಕೊಳ್ಳಲು ಆಗುತ್ತಿರಲಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ನಾವು 40 ವರ್ಷ ನೋಡಿಕೊಂಡಿದ್ದೇವೆ ಎಂದು ಉತ್ತರಿಸುತ್ತಾರೆ. ಸಾಕ್ಷಿ ಪುನಃ ಹೇಳುತ್ತಾರೆ ಅವರು ತೀರಿಕೊಳ್ಳುವವರೆಗೂ ನಾವು ನೋಡಿಕೊಂಡಿದ್ದೇವೆ ಎಂದು ಉತ್ತರಿಸುತ್ತಾರೆ.  ನಿಮ್ಮ ತಂದೆ ತಾಯಿ ಬದುಕಿದ್ದಾಗ ನೀವು ಅವರನ್ನು ಹೋಗಿ ನೋಡಿಕೊಂಡು ಬರುತ್ತಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ತಾಯಿ ಹಾಗೂ ನಿಮ್ಮ ತಮ್ಮ ಒಂದೇ ಮನೆಯಲ್ಲಿ ಇದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ತಾಯಿ ತೀರಿಕೊಳ್ಳುವವರೆಗೂ ಯಾರ ಜೊತೆ ವಾಸವಿದ್ದರು ಎಂದರೆ ಸಾಕ್ಷಿ ಒಂದೇ ಮನೆಯಲ್ಲಿ ಅವರೊಂದು ಕಡೆ ನಮ್ಮ ತಮ್ಮ ಒಂದು

ಕಡೆ ಇದ್ದರು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ತಾಯಿ ವಯಸ್ಸಾದ ಕಾರಣ ಸಹಜವಾಗಿಯೇ ತೀರಿಕೊಂಡಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ತಾಯಿ ಬದುಕಿದ್ದಾಗ ದಾವಾ ಸ್ವತ್ತುಗಳ ಮೇಲೆ ಏನಾದರೂ ಸಾಲ ಮಾಡಿದ್ದರಾ ಎಂದರೆ ಸಾಕ್ಷಿ ಏನು ಇಲ್ಲ ಎಂದು ಉತ್ತರಿಸುತ್ತಾರೆ. ಆ ವಿಚಾರ ನಿಮಗೇನು ಗೊತ್ತಿಲ್ಲ ಎಂದರೆ ಸಾಕ್ಷಿ ಯಾವುದೇ ಸಾಲ ಮಾಡಿರಲಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಹಾಗೂ ನಿಮ್ಮ ಚಿಕ್ಕಪ್ಪಂದಿರ ಹೆಸರಿನಲ್ಲಿ ದಾವಾ ಸ್ವತ್ತುಗಳು ಜಂಟೀ ಪಹಣಿಯಲ್ಲಿಯೇ ಇವೆ ಎಂದರೆ ಸಾಕ್ಷಿ ಏನು ಇಲ್ಲ ಇದೇ ನ್ಯಾಯಾಲಯದಲ್ಲಿ ಬೇರೆ ಬೇರೆ ಮಾಡಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಪಹಣಿಗಳು ಹಾಗೂ ಮ್ಯುಟೇಶನ್‌ಗಳು ನನಗೆ ಗೊತ್ತು. ನಾನು ಓದಿರುವುದಿಲ್ಲ. ನೀವು ಹಾಜರುಪಡಿಸಿರುವ ಪಹಣಿ ಹಾಗೂ ಎಂ ಆರ್‌ಗಳಲ್ಲಿ ನಿಮ್ಮ ತಂದೆ ಹಾಗೂ ಚಿಕ್ಕಪ್ಪಂದಿರ ಹೆಸರಿನಲ್ಲಿ ಜಂಟೀಯಾಗಿವೆ ಎಂದರೆ ಸಾಕ್ಷಿ ಏನು ಇಲ್ಲ ಎಂದು ಉತ್ತರಿಸುತ್ತಾರೆ. ಹಾಗಾದರೆ ನೀವು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ನಿಮ್ಮ ತಂದೆ ಹಾಗೂ ಚಿಕ್ಕಪ್ಪಂದಿರ ಹೆಸರಿನಲ್ಲಿ ಜಂಟೀಯಾಗಿ ಬರುತ್ತಿರುವ ದಾಖಲಾತಿಗಳು ಸುಳ್ಳಾ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಸದರಿ ಪಹಣಿಗಳಲ್ಲಿ ನಿಮ್ಮ ತಂದೆ ಹಾಗೂ ಚಿಕ್ಕಪ್ಪಂದಿರು ಜಂಟೀಯಾಗಿ ಹಲವಾರು ಸಾಲಗಳನ್ನು ಮಾಡಿರುವ ಬಗ್ಗೆ ನಮೂದಾಗಿ ಬರುತ್ತಿದೆ ಎಂದರೆ ಸಾಕ್ಷಿ ಸುಳ್ಳು, ಯಾವುದೇ ಸಾಲ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಮ್ಮ ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಂಡಿದ್ದಲ್ಲಿ ಈ ಕೇಸನ್ನು ನೀವು ಹಾಕುತ್ತಲೇ ಇರಲಿಲ್ಲ ಎಂದರೆ ಸಾಕ್ಷಿ ಹೌದು, ನನ್ನ ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಂಡಿದ್ದಲ್ಲಿ ನಾವು ಕೇಳುತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಮದುವೆ ಮಾಡುವ ಕಾಲಕ್ಕೆ ನಿಮ್ಮ ತಂದೆಗೆ ಸುಮಾರು ಎಷ್ಟು ವರ್ಷ ವಯಸ್ಸು ಎಂದರೆ ಸಾಕ್ಷಿ ಸುಮಾರು 50 ವರ್ಷ ಇರಬಹುದು ಎಂದು ಉತ್ತರಿಸುತ್ತಾರೆ. ನಿಮ್ಮ ತಮ್ಮ ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ ಎಂದು ಹೇಳಿದ್ದಿರಿ ಎಷ್ಟು ವರ್ಷಗಳಿಂದ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸಾಕ್ಷಿ ಸುಮಾರು 20 ವರ್ಷಗಳಿಂದ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ತಾಯಿಯನ್ನು ನಿಮ್ಮ

ತಮ್ಮ ಸರಿಯಾಗಿ ನೋಡಿಕೊಳ್ಳುವಂತೆ ನೀವೆನಾದರೂ ನಿಮ್ಮ ತಮ್ಮನಿಗೆ ಬುದ್ದಿ ಹೇಳಿದ್ದೀರಾ ಎಂದರೆ ಸಾಕ್ಷಿ ಅವನು ನಮ್ಮ ಹತ್ತಿರ ಮಾತನಾಡುತ್ತಿರಲಿಲ್ಲ ಹಾಗಾಗಿ ನಾವೇನು ಹೇಳಿಲ್ಲ ಎಂದು ಉತ್ತರಿಸುತ್ತಾರೆ. ಈ ಕುರಿತಾಗಿ ಯಾವುದೇ ಪಂಚಾಯಿತಿ ಮಾಡಿಸಿ ನನ್ನ ತಮ್ಮನಿಗೆ ಹೇಳಿರುವುದಿಲ್ಲ. ನಿಮ್ಮ ತಮ್ಮ 20 ವರ್ಷಗಳಿಂದ ನಿಮ್ಮ ತಂದೆ ತಾಯಿಯನ್ನು ನೋಡಿಕೊಳ್ಳಲಿಲ್ಲವೆಂದು ನೀವೆನಾದರೂ ನಿಮ್ಮ ತಂದೆ ತಾಯಿಯನ್ನು ನಿಮ್ಮ ಜೊತೆ ಕರೆದುಕೊಂಡುಡ ಹೋದಿರಾ ಎಂದರೆ ಸಾಕ್ಷಿ ಇಲ್ಲ, ನನ್ನ ತಂದೆ ತಾಯಿಯೇ ಬೇರೆ ಅಡಿಗೆ ಮಾಡಿಕೊಂಡು ಅವರೇ ವಾಸವಿದ್ದರು, ನಾವು ಆಗಾಗ ಬಂದು ನೋಡಿಕೊಂಡು ಹೋಗುತ್ತಿದ್ದೆವು ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತುಗಳು ಈಗಲೂ ನಿಮ್ಮ ತಂದೆ ಹಾಗೂ ಚಿಕ್ಕಪ್ಪಂದಿರ ಹೆಸರಿನಲಲ್ಲಿ ಜಂಟೀಯಾಗಿಯೇ ಇವೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ವೇಲುರು ವೆಂಕಟಯ್ಯ, ಚಿಕ್ಕಪ್ಪಂದಿರಾದ ವೆಂಕಟರಾಮಪ್ಪ ಮತ್ತು ಶ್ರೀರಾಮಪ್ಪ ಸೇರಿ ವಿಜಯ ಬ್ಯಾಂಕಿನಲ್ಲಿ, ವಿ ಎಸ್ ಎಸ್ ಎನ್ ಹಾಗೂ ಇತರೆ ಸ್ಥಳೀಯ ಬ್ಯಾಂಕುಗಳಲ್ಲಿ ಬಹಳ ಸಾಲ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಮ್ಮ ನಿಮ್ಮ ತಂದೆ ತಾಯಿ ಬದುಕಿದ್ದಾಗ ಅವರನ್ನು ಚೆನ್ನಾಗಿಯೇ ನೋಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ಹಾಗೂ ನಿಮ್ಮ ಸಹೋದರಿಯರ ಮದುವೆಗಾಗಿ ನಿಮ್ಮ ತಂದೆ ಮಾಡಿದ್ದಂತಹ ಎಲ್ಲಾ ಸಾಲಗಳನ್ನು ನಿಮ್ಮ ತಮ್ಮನೇ ಈಗಲೂ ತೀರಿಸುತ್ತಿದ್ದಾರೆ ಎಂದರೆ ಸಾಕ್ಷಿ ಎಲ್ಲಾ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಜೊತೆ ಸೇರಿ ನಿಮ್ಮ ತಮ್ಮ ಸಹ ಜಮೀನ ಅಭಿವೃದ್ದಿಗೆ ಸಾಲ ಮಾಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಯಾವುದೇ ಸಾಲ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಮುಂದುವರೆದು ಸೋಲಾರ ಕಂಪನಿಗೆ ಹೊಲವನ್ನು ಗುತ್ತಿಗೆ ಕೊಟ್ಟಿದ್ದಾರೆ ಯವುದೇ ಬೆಳೆ ಇಡುತ್ತಿಲ್ಲ ಎಂದು ಉತ್ತರಿಸುತ್ತಾರೆ. ಸೋಲಾರಗೆ ಗುತ್ತಿಗೆ ಕೊಡುವುದಕ್ಕಿಂತ ಮುಂಚೆ ನಿಮ್ಮ ತಮ್ಮ, ನಿಮ್ಮ ತಂದೆ ಹಾಗೂ ಚಿಕ್ಕಪ್ಪಂದಿರು ಒಟ್ಟಿಗೆ ವ್ಯವಸಾಯ ಮಾಡುತ್ತಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನನ್ನ ತಂದೆ ಹಾಗೂ ಚಿಕ್ಕಪ್ಪಂದಿರು ಒ ಎಸ್ 12/2013 ರ ತೀರ್ಪಿನಂತ ಅವರವರ ಭಾಗದಲ್ಲಿ ಇದ್ದಾರೆ ಎಂದು

ಉತ್ತರಿಸುತ್ತಾರೆ. ಒ ಎಸ್ 12/2013 ರಲ್ಲಿ ನಿಮ್ಮ ತಂದೆಯವರಿಗೆ ಬಂದ ಭಾಗದಲ್ಲಿ ನಿಮ್ಮ ತಂದೆ ಹಾಗೂ ತಮ್ಮ ಜಂಟೀಯಾಗಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಗಳು ನಿಮ್ಮ ತಂದೆಯದು ಅಲ್ಲ, ನಿಮ್ಮ ತಾತನದು ಅಲ್ಲ ಎಂದರೆ ಸಾಕ್ಷಿ ಹಾಗಿದ್ದರೇ ನಾನೇಕೇ ಕೇಸು ಹಾಕುತ್ತೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯ ಭಾಗಕ್ಕೆ ಬಂದಿರುವ ಆಸ್ತಿಗಳು ನಿಮ್ಮ ಚಿಕ್ಕಪ್ಪಂದಿರ ಭಾಗಕ್ಕೆ ಹೋಗಿರುವ ಆಸ್ತಿಗಳು ಯಾವುವು ನಿಮ್ಮ ಪಿತ್ರಾರ್ಜಿತತ ಆಸ್ತಿಗಳಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯ ಭಾಗಕ್ಕೆ ಬಂದಿರುವ ಆಸ್ತಿಗಳು ನಿಮ್ಮ ಚಿಕ್ಕಪ್ಪಂದಿರ ಭಾಗಕ್ಕೆ ಹೋಗಿರುವ ಆಸ್ತಿಗಳು ನಿಮ್ಮ ಅಜ್ಜಿ ಲಕ್ಷ್ಮಮ್ಮನವರ ಆಸ್ತಿಗಳು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ.

ವಿನಂತಿಯ ಮೇರೆಗೆ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.